**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ , ಉಡುಪಿ</u>**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

| | |
|---|---|
| ಸಾಕ್ಷಿದಾರರ ಹೆಸರು | ಸುಶೀಲ |
| ಗಂಡನ ಹೆಸರು | ಮಾಧವ |
| ವಯಸ್ಸು | 42 ವರ್ಷ |
| ಉದ್ಯೋಗ | ಕಸ ವಿಲೇವಾರಿ, ಬಡಾ ಗ್ರಾಮ ಪಂಚಾಯತ್ , ಉಚ್ಚಿಲ |
| ವಿಳಾಸ | ಉಚ್ಚಿಲ |

ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ಪರಿಶಿಷ್ಟ ಪಂಗಡದ ನಾಯ್ಕ ಜನಾಂಗಕ್ಕೆ ಸೇರಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಅರೋಪಿ ಗೊತ್ತು, ಆತ ಬಂಟ್ ಸಮುದಾಯದ ಜನಾಂಗಕ್ಕೆ ಸೇರಿದವರು. ಆರೋಪಿಗೆ ನಾನು ಪರಿಶಿಷ್ಟ ಪಂಗಡಕ್ಕೆ ಸೇರಿರುವುದು ಗೊತ್ತು. ನನ್ನ ಅಮ್ಮನ ಊರು ಶಿವಮೊಗ್ಗ. ನಾನು ಹುಟ್ಟಿ - ಬೆಳೆದಿದ್ದು ಬಡಾ ಗ್ರಾಮದಲ್ಲಿ. ನಾನು ಬಡಾ ಗ್ರಾಮದ ಕಸ ವಿಲೇವಾರಿ ಘಟದಲ್ಲಿ ಸಹಾಯಕಿಯಾಗಿ ಕೆಲಸ ಮಾಡಿಕೊಂಡಿದ್ದೇನೆ. ಅದನ್ನು ಪಂಚಾಯಿತಿಯಿಂದ ನನ್ನ ಮಗಳು ಶರಣ್ಯ ಗುತ್ತಿಗೆಗೆ ತೆಗೆದುಕೊಂಡಿದ್ದಳು. ನಾವು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ.

2) ನನಗೆ ಚಾಸಾ- 2 ಗೊತ್ತು, ಆತ ಕಸ ವಿಲೇವಾರಿ ಘಟಕದ ವಾಹನದ ಚಾಲಕ. ಆ ವಾಹನವನ್ನು ಪಂಚಾಯತಿಯವರು ಒದಗಿಸುತ್ತಾರೆ. ನಾವು ಗ್ರಾಮದ ಸುಮಾರು 3500 ಮನೆಗಳ ಕಸ ಸಂಗ್ರಹಿಸುತ್ತೇವೆ. ಅದಕ್ಕಾಗಿ ಚಾಸಾ-3 ಮತ್ತು 4 ಇವರನ್ನು ನೇಮಿಸಿಕೊಂಡಿದ್ದೆವು. ಕಸ ವಿಲೇವಾರಿ ಘಟಕ ಉಚ್ಚಿಲದ ಹಳೇ ಮಾರ್ಕೆಟ್ ಬಳಿ

ಇದೆ. ನಾವು ಸಂಗ್ರಹಿಸಿದ ಕಸವನ್ನು ಅಲ್ಲಿಗೆ ತಂದು ಹಾಕುತ್ತೇವೆ. ಅಲ್ಲಿ ಕಸವನ್ನು ಬೇಪರ್ಡಿಸಿ, ಒಣ ಕಸವನ್ನು ನಿಟ್ಟೆಗೆ ಕಳುಹಿಸುತ್ತೇವೆ, ಹಸಿ ಕಸವನ್ನು ಅಲ್ಲಿಯೇ ಇರುವ ಗೊಬ್ಬರ ಮಾಡುವ ಮೆಶಿನ್ ಗೆ ಹಾಕುತ್ತೇವೆ. ಸದರಿ ಮೆಶಿನ್ ನಲ್ಲಿ ಕೂಡಾ ಹೋಗದ ತ್ಯಾಜ್ಯವನ್ನು ಪ್ರತ್ಯೇಕ ಚೀಲದಲ್ಲಿ ಕಟ್ಟಿ ಇಡುತ್ತೇವೆ. ಹಾಗೇ ಇಟ್ಟಿದ್ದ ಚೀಲಗಳ ಬಗ್ಗೆ ಸಾರ್ವಜನಿಕರಿಂದ ತಕರಾರುಗಳು ಬರುತ್ತಿತ್ತು. ಆ ವಿಷಯ ಪಂಚಾಯಿತಿಯ ಗಮನಕ್ಕೆ ತಂದಿದ್ದೆವು, ಅದರಂತೆ ಪಂಚಾಯಿತಿಯವರು ಬಡಾ ಗ್ರಾಮದ ಪೊಲ್ಯ ಎಂಬಲ್ಲಿ 50 ಸೆಂಟ್ಸಗಳ ಜಾಗವನ್ನು ಗುರುತಿಸಿಕೊಟ್ಟಿದ್ದರು. ಆ ಜಾಗೆ ಈ ಮೊದಲು ಇದ್ದ ಹಳೇ ಮಾರ್ಕೆಟ್ ಬಳಿ ಇರುವ ತ್ಯಾಜ್ಯದ ಚೀಲಗಳನ್ನು ಹೊಸದಾಗಿ ಗುರುತಿಸಿರುವ ಪೊಲ್ಯದ ಜಾಗೆಗೆ ತಂದು ಹಾಕುವಂತೆ ತಿಳಿಸಿದ್ದರು.

3) ಅದರಂತೆ ನಾನು ತಾರೀಕು 25-02-2022 ರಂದು ಬೆಳಿಗ್ಗೆ 7-30 ಗಂಟೆಗೆ ನಮ್ಮ ಹಳೆಯ ಕಸವಿಲೇವಾರಿ ಘಟಕದ ಬಳಿ ಬಂದೆ, ಅಲ್ಲಿ ಬಂದಿದ್ದ ಚಾಸಾ-3 ಮತ್ತು 4 ಇವರಿಗೆ ಕಟ್ಟಿ ಇಟ್ಟಿದ್ದ ಚೀಲಗಳನ್ನು ಆದಿನ ಬಾಡಿಗೆಗೆ ಬಂದ ಗಾಡಿಗೆ ತುಂಬಿಸಿದ್ದೆವು. ಆದಿನ ಚಾಸಾ-3, 4 ಅಲ್ಲದೆ ಇಬ್ಬರು ಬೇರೆ ಕೆಲಸಗಾರರು ಸಹ ಇದ್ದರು. ಆಗ ಅಲ್ಲಿ ಚಾಸಾ-2 ಸಹ ಇದ್ದರು. ನಾನು ಮತ್ತು ಚಾಸಾ-2 ನಮ್ಮ ಕಾರಿನಲ್ಲಿ, ಚಾಸಾ-3 ಮತ್ತು 4, ಇತರ ಕೆಲಸಗಾರರು ಬಾಡಿಗೆ ವಾಹನದಲ್ಲಿ ಗುರುತಿಸಿದ ಹೊಸ ಜಾಗೆಗೆ ಬಂದಿದ್ದರು. ಅಲ್ಲಿ ರಸ್ತೆಯಲ್ಲಿ ಗಾಡಿಯನ್ನು ನಿಲ್ಲಿಸಿ, ಚೀಲಗಳನ್ನು ಹಾಕಬೇಕಾಗಿದ್ದ ಜಾಗೆಗೆ ಅವುಗಳನ್ನು ತಲೆ ಹೊರೆಯಲ್ಲಿ ಸಾಗಿಸುತ್ತಿದ್ದರು. ಅದಕ್ಕಾಗಿ 10 ಮೂಟೆಗಳನ್ನು ವಾಹನದಿಂದ ಕೆಳಗೆ ತೆಗೆದಿದ್ದರು. ಆಗ ಅಲ್ಲಿಗೆ ಆರೋಪಿ ಸ್ಕೂಟಿಯಲ್ಲಿ ಬಂದಿದ್ದ. ಆರೋಪಿ ನಮ್ಮನ್ನು ಉದ್ದೇಶಿಸಿ ''ಯಾರ ಅಪ್ಪನ ಜಾಗೆಯಲ್ಲಿ ಹಾಕುತ್ತಿದ್ದೀರಿ'' ಎಂದು ಕೇಳಿದ್ದ, ಆಗ ನಾನು ಆ ಜಾಗೆಯನ್ನು ಪಂಚಾಯಿತಿಯವರು ಗುರುತಿಸಿ ಕೊಟ್ಟಿದ್ದರು ಎಂದು ಹೇಳಿ, ಬೇಕಾದರೆ ಪಿ ಡಿ ಓ ಹತ್ತಿರ ಮಾತನಾಡಿ ಎಂದು ಹೇಳುತ್ತಿದ್ದಾಗ, ಆರೋಪಿ ಚಾಸಾ-3 ಮತ್ತು 4 ಇವರ ಬಳಿ ಹಲ್ಲೆ ಮಾಡಲು ಹೋಗುತ್ತಿದ್ದನು. ಆಗ ನಾನು ಅವರನ್ನು ಮುಟ್ಟಬಾರದೆಂದು ಹೇಳಿ ಆರೋಪಿಯನ್ನು ತಡೆದಿದ್ದೆ. ಆಗ ಆರೋಪಿ ನನಗೆ ಕೆನ್ನೆಗೆ ಕೈಯಿಂದ ಹೊಡೆದಿದ್ದರು. ಆರೋಪಿ ನನಗೆ ''ನೀನು ಕೀಳು ಜಾತಿಯವಳು, ನಿನಗೆ ಮಾಡಲು ಬೇರೆ ಕೆಲಸ ಸಿಗುವುದಿಲ್ಲಾ, ಸೂಳೇ,ರಂಡೇ ''ಎಂದು

ನನಗೆ ಹೇಳಿದ್ದರು. ನನ್ನ ಕೈಯಲ್ಲಿದ್ದ ಮೊಬೈಲ್ ನ್ನು ಕಿತ್ತುಕೊಂಡು ನೆಲಕ್ಕೆ ಹೊಡೆದಿದ್ದರು. ಅದು ಪುಡಿಪುಡಿಯಾಗಿತ್ತು. ಅಲ್ಲಿಯೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ. ಈ ಮೊದಲು ಆರೋಪಿ ನನಗೆ ಹಲ್ಲೆ ಮಾಡುವುದನ್ನು, ನಾನು ಚಾಸಾ-10 ಇವರೊಂದಿಗೆ ಮಾತನಾಡುತ್ತಿದ್ದೆ, ಅವರು ಚಾಸಾ-6 ಇವರನ್ನು ಕಳುಹಿಸಿಕೊಡುತ್ತಿರುವುದಾಗಿ ಹೇಳಿದ್ದರು. ಅಷ್ಟರಲ್ಲಿ ಆರೋಪಿ ನನಗೆ ಇನ್ನೊಮ್ಮೆ ಆ ಕಡೆ ಬಂದರೆ, ನನ್ನ ಕೈ-ಕಾಲು ಮುರಿಯುವುದಾಗಿ ಹೇಳಿ ಅಲ್ಲಿಂದ ಹೋಗಿದ್ದ.

3) ಚಾಸಾ-6 ಅಲ್ಲಿಗೆ ಬಂದ ನಂತರ ಇಳಿಸಿದ್ದ ಚೀಲಗಳನ್ನು ಪುನಃ ಗಾಡಿಗೆ ಹಾಕಿ, ಅವುಗಳನ್ನು ಮೊದಲು ಇದ್ದ ಹಳೆಯ ಘಟಕಕ್ಕೆ ತೆಗೆದುಕೊಂಡು ಹೋಗಿದ್ದೆವು. ಅಲ್ಲಿ ಇಟ್ಟಿದ್ದೆವು. ನಾನು ಅಲ್ಲಿಂದ ನನಗೆ ಆದ ಹಲ್ಲೆಗಾಗಿ ಆಸ್ಪತ್ರೆಗೆ ಹೋಗಿದ್ದೆ. ಅದು ಪಡುಬಿದ್ರೆಯ ಸರಕಾರಿ ಆಸ್ಪತ್ರೆ. ಅಲ್ಲಿ ಪ್ರಥಮ ಉಪಚಾರ ಮಾಡಿ, ನನ್ನನ್ನು ಜಿಲ್ಲಾ ಆಸ್ಪತ್ರೆಗೆ ಹೋಗಲು ಹೇಳಿದ್ದರು. ಅದರಂತೆ ಜಿಲ್ಲಾ ಆಸ್ಪತ್ರೆಗೆ ಬಂದಾಗ ಮಧ್ಯಾಹ್ನದ 12.30 ಗಂಟೆ. ಅಲ್ಲಿ ನನಗೆ ಉಪಚಾರ ನೀಡಿದ್ದರು. ಅಲ್ಲಿಂದ ಸಂಜೆ ನಾನು ಹೊರ ಬಂದಿದ್ದೆ. ಆದ ಘಟನೆಗಾಗಿ ನಂತರ ದೂರು ಕೊಟ್ಟಿದ್ದೆ. ಸದರಿ ದೂರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-1,** ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-1(ಎ)** ಎಂದು ಗುರುತಿಸಿದ್ದೇನೆ.

4) ಮಾರನೇ ದಿನ ಪೊಲೀಸರು ಗಲಾಟೆಯಾದ ಜಾಗೆಗೆ ಮಧ್ಯಾಹ್ನದ 12 ಗಂಟೆಯ ಸಮಯಕ್ಕೆ ಬಂದಿದ್ದರು. ಅವರಿಗೆ ನಾನು ಜಾಗ ತೋರಿಸಿದ್ದೆ. ಆಗ ಚಾಸಾ-11 ಮತ್ತು 12 ಸಹ ಅಲ್ಲಿ ಇದ್ದರು. ಪೊಲೀಸರು ಅಲ್ಲಿ ಸುಮಾರು 1 ಗಂಟೆಯವರೆಗೆ ಪಂಚನಾಮೆ ಮಾಡಿದ್ದರು. ಪಂಚನಾಮೆಗೆ ನನ್ನ ಸಹಿಯನ್ನು ಸಹ ಪಡೆದಿದ್ದರು. ಆ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2,** ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2(ಎ)** ಎಂದು ಗುರುತಿಸಿದ್ದೇನೆ. ಆಗ ಚಾಸಾ-11 ಮತ್ತು 12 ಸಹ ಸಹಿ ಮಾಡಿದ್ದರು. ಅವರ ಸಹಿಗಳನ್ನು ಸಹ ನೋಡಿ ಗುರುತಿಸಬಲ್ಲೆ. ಅವುಗಳನ್ನು **ನಿಶಾನೆ ಪಿ-2(ಬಿ) ಮತ್ತು 2(ಸಿ)** ಎಂದು ಗುರುತಿಸಿದ್ದೇನೆ. ಆಗ ಪೊಲೀಸರು 2 ಪೋಟೋಗಳನ್ನು ತೆಗೆದಿದ್ದರು. ಆ ಪೋಟೋಗಳನ್ನು ಒಟ್ಟಾಗಿ ನಿಶಾನೆ ಪಿ-3 ಎಂದು ಗುರುತಿಸಿದ್ದೇನೆ.

5) ಅದೇ ದಿನ ಸುಮಾರು 3 ಗಂಟೆಯ ಸಮಯದಲ್ಲಿ ನಾನು ನನ್ನ ಮೊಬೈಲ್ ನ್ನು ಪೊಲೀಸರ ಮುಂದೆ ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿದ್ದೆ. ಆಗ ಚಾಸಾ-13 ಮತ್ತು 14 ಸಹ ಇದ್ದರು. ಪೊಲೀಸರು ಅದನ್ನು ಜಪ್ತು ಮಾಡಿದ್ದರು. ಆಗ ಪೊಲೀಸರು ಮಹಜರು ಮಾಡಿ ನನ್ನ ಸಹಿ ಪಡೆದಿದ್ದರು. ಸದರಿ ಮಹಜರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-4,** ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-4(ಎ)** ಎಂದು ಗುರುತಿಸಿದ್ದೇನೆ. ಅದಕ್ಕೆ ಚಾಸಾ-13 ಮತ್ತು 14 ಸಹ ಸಹಿ ಮಾಡಿದ್ದರು. ಅವರ ಸಹಿಗಳನ್ನು **ನಿಶಾನೆ ಪಿ-4(ಬಿ) ಮತ್ತು ನಿಪಿ-4(ಸಿ**) ಎಂದು ಗುರುತಿಸಿದ್ದೇನೆ. ಆ ಸಮಯ ತೆಗೆದಿದ್ದ 2 ಪೋಟೋಗಳನ್ನು ನೋಡಿ ಅವುಗಳನ್ನು **ನಿಶಾನೆ ಪಿ-5** ಎಂದು ಒಟ್ಟಾಗಿ ಗುರುತಿಸಿದೆ. ಆದಿನ ಹಾಜರುಪಡಿಸಿದ ಮೊಬೈಲ್ ನ್ನು, ಈಗ ಎಸ್ ಹೆಚ್ ಓ ಸೀಲು ಇರುವ ಪ್ಯಾಕ್ ನಿಂದ ತೆಗೆದು, ನೋಡಿ, ಗುರುತಿಸಿದ್ದು, ಅದನ್ನು **ಎಂಓ-1** ಎಂದು ಗುರುತಿಸಿದೆ. ಈಗ ನೋಡಿದ ಪೋಟೋ ನನ್ನ ಹಾಳಾಗಿದ್ದ ಮೊಬೈಲ್ ನ ಪೋಟೋ, ಅದನ್ನು ನಿಶಾನೆ ಪಿ-6 ಎಂದು ಗುರುತಿಸಿದೆ. ನನ್ನ ಮೊಬೈಲ್ ಹಾಳಾಗಿ ನನಗೆ ಸುಮಾರು 15 ಸಾವಿರ ನಷ್ಟವಾಗಿದೆ. ಘಟನೆ ಸಂಬಂಧಪಟ್ಟಂತೆ ನನ್ನನ್ನು ವಿಚಾರಿಸಿದ್ದರು. ಆಗ ವಿವರವಾದ ಹೇಳಿಕೆ ಕೊಟ್ಟಿದ್ದೆ. ಆದಿನ ನನಗೆ ಹಲ್ಲೆ ಮಾಡಿದ ಆರೋಪಿಯನ್ನು ಈದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ.

**(ಸಮಯ 2 ಗಂಟೆ ಆಗಿದ್ದರಿಂದ ಪಾಟೀಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)**

ಮಧ್ಯಾಹ್ನ ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಆರೋಪಿ ಪರವಾಗಿಃ ಶ್ರೀ ಟಿ.ವಿ.ಕೆ.ಎಸ್. ವಕೀಲರು ದ.ಪ್ರ.ಸಂ 231(2)ರ ಅರ್ಜಿ ಸಲ್ಲಿಸಿದ್ದರಿಂದ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.